# ಸಲ್ಲುಗೆ ಶ್ರೇಯಸ್ಸು

ಚೆನ್ನಾಗಿ ಉಂಡು ಗುಂಡು ಗುಂಡಾಗಿದ್ದ ಸೋನಾಕ್ಷಿ ಸಿನ್ಹಾಳನ್ನು ತೂಕ ಇಳಿಸಿಕೊಳ್ಳುವಂತೆ ಪ್ರೋತ್ಸಾಹಿಸಿ 'ದಬಾಂಗ್' ಚಿತ್ರದ ಮೂಲಕ ಬಿ–ಟೌನ್‌ಗೆ ಪರಿಚಯಿಸಿದ್ದು ಸಲ್ಮಾನ್ ಖಾನ್. 'ದಬಾಂಗ್' ನಿರೀಕ್ಷೆಯನ್ನೂ ಮೀರಿದ ಯಶಸ್ಸು ಕಂಡಿತು. ರಾತ್ರೋ ರಾತ್ರಿ ಸೋನಾಕ್ಷಿ 'ಸ್ಟಾರ್' ಆದಳು. ಸಲ್ಲು ಮತ್ತೆ ಮತ್ತೆ ದೊಡ್ಡ ಗೆಲುವನ್ನು ಕಾಣುತ್ತಿದ್ದರೆ, ಆತ ಪರಿಚಯಿಸಿದ ನಾಯಕಿ ಸೋನಾಕ್ಷಿ ಚಿತ್ರರಂಗದಲ್ಲಿ ಸಾಕಷ್ಟು ದೂರ ಸವೆಸಿದ್ದಾಳೆ.

'ದಬಾಂಗ್' ಬಿಡುಗಡೆಯಾಗಿ ಇತ್ತೀಚೆಗೆ ಐದು ವರ್ಷ ಪೂರೈಸಿತು. ಈ ಸಂದರ್ಭದಲ್ಲಿ ನಟಿ ಸೋನಾಕ್ಷಿ ತನ್ನೆಲ್ಲಾ ಸಾಧನೆಗೂ ಸಲ್ಮಾನ್ ಖಾನ್ ಕಾರಣ. ಎಲ್ಲಾ ಶ್ರೇಯಸ್ಸೂ ಅವರಿಗೇ ಸಲ್ಲುತ್ತದೆ ಎಂದಿದ್ದಾಳೆ. ಸದ್ಯ ಸೋನಾಕ್ಷಿ 'ಫೋರ್ಸ್ 2' ಚಿತ್ರದಲ್ಲಿ ಕಾಣಿಸಿಕೊಳ್ಳಲು ತಯಾರಿ ನಡೆಸಿದ್ದಾಳೆ.



ಈ ನಡುವೆ ಮುಂಬೈನಲ್ಲಿ ಜೈನರ ಧಾರ್ಮಿಕ ಆಚರಣೆ ವೇಳೆ ಮಾಂಸ ಮಾರಾಟ ನಿಷೇಧಿಸಿರುವ ಕ್ರಮವನ್ನು ಟೀಕಿಸಿ ಸೋನಾಕ್ಷಿ ಟ್ವೀಟ್ ಮಾಡಿದ್ದಳು. ಆದರೆ ಟ್ವಿಟರ್‌ನಲ್ಲಿನ ಪತ್ತೆದಾರರು 2014ರಲ್ಲಿ ಸೋನಾಕ್ಷಿ ಮಾಡಿದ್ದ ಟ್ವೀಟ್‌ಅನ್ನು ಹೆಕ್ಕಿ ತೆಗೆದು ಆಕೆ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಪ್ರಾಣಿಗಳ ಮೇಲೆ ಕಾಸ್ಮೆಟಿಕ್‌ಗಳನ್ನು ಪ್ರಯೋಗಿಸುವುದರ ವಿರುದ್ಧ ಆಗ ಆರೋಗ್ಯ ಸಚಿವರ ಗಮನ ಸೆಳೆಯಲು ಸೋನಾಕ್ಷಿ ಪ್ರಯತ್ನಿಸಿದ್ದಳು. ಪ್ರಾಣಿ ಹಿಂಸೆ ತರವಲ್ಲ ಎಂದು ಪ್ರತಿಪಾದಿಸಿದ್ದಳು. ಆದರೆ ಈಗ ಇಬ್ಬಗೆ ಧೋರಣೆ ತಳೆದಿದ್ದಾಳೆ ಎಂದು ಕೆಲವರು ಕೆಂಡಕಾರಿದ್ದಾರೆ.



# '..ಟೈಗರ್ ಮೌಂಟೇನ್'

ಹಾಲಿವುಡ್‌ನಲ್ಲಿ ಆ್ಯಕ್ಷನ್ ಚಿತ್ರಗಳಿಗೆ ಅವುಗಳದ್ದೇ ಆದ ಪರಂಪರೆಯಿದೆ. ಚೀನಾದ ಸಿನಿಮಾಗಳೂ ಈ ಪರಂಪರೆಯಿಂದ ಹೊರತಾಗಿಲ್ಲ. ತ್ಸುಯಿ ಹಾರ್ಕ್ ನಿರ್ದೇಶನದ ಹೊಸ ಚಿತ್ರ 'ದಿ ಟೇಕಿಂಗ್ ಆಫ್ ದಿ ಟೈಗರ್ ಮೌಂಟೇನ್' ಥ್ರೀ ಡಿ ಚಿತ್ರ ಇದೀಗ ಆ್ಯಕ್ಷನ್ ಚಿತ್ರಪ್ರೇಮಿಗಳನ್ನು ರಂಜಿಸಲು ಬರುತ್ತಿದೆ.

1979ರಲ್ಲಿ 'ದಿ ಬಟರ್‌ಫ್ಲೈ ಮರ್ಡರ್ಸ್' ಮೂಲಕ ಚಿತ್ರಜೀವನ ಶುರು ಮಾಡಿದ ಹಾರ್ಕ್, ಆ ಬಳಿಕ ದಿ ವಾರಿಯರ್, ಡಬಲ್ ಟೀಮ್, ಆಲ್ ಅಬೌಟ್ ವುಮನ್ ಚಿತ್ರಗಳ ಮೂಲಕ ಹೆಸರು ಮಾಡಿದ್ದರು. ಈಗ '...ಟೈಗರ್ ಮೌಂಟೇನ್' ಮೂಲಕ ಚೀನಾದ ಸೇನೆಯೊಂದು ಡಕಾಯಿತರ ತಂಡವೊಂದನ್ನು ಮಣಿಸಲು ಹೂಡುವ ತಂತ್ರ– ಪ್ರತಿತಂತ್ರಗಳ ಬಗ್ಗೆ ಕಥೆ ಹೇಳಿದ್ದಾರೆ. 150 ದಶಲಕ್ಷ ಅಮೆರಿಕನ್ ಡಾಲರ್ ವೆಚ್ಚವಾಗಿರುವ ಈ ಚಿತ್ರ ಏಕಕಾಲದಲ್ಲಿ ತಮಿಳು (ಪುಲಿ ಮಲೈ ವೆಟ್ಟೈ) ಮತ್ತು ತೆಲುಗು ಡಬ್ಬಿಂಗ್ ರೂಪದಲ್ಲೂ ಮುಂದಿನ ವಾರ ತೆರೆಗೆ ಬರುತ್ತಿದೆ.



# ವಿದ್ಯಾ ವಯಸ್ಸು ಮೀಮಾಂಸೆ!

'ನಾನು 36 ವರ್ಷದ ಹೆಮ್ಮೆಯ ಮಹಿಳೆ'– ವಯಸ್ಸು ಹೇಳಿಕೊಳ್ಳಲು ನಿರಾಕರಿಸುವ ನಟಿಯರ ನಡುವೆ ಅಪವಾದವೆನ್ನುವಂತೆ ಹೀಗೆ ತಮ್ಮ ವಯಸ್ಸನ್ನು ಅಳುಕಿಲ್ಲದೆ ಬಹಿರಂಗವಾಗಿ ಹೇಳಿಕೊಂಡಿದ್ದು ನಟಿ ವಿದ್ಯಾ ಬಾಲನ್. ಒಮ್ಮೊಮ್ಮೆ ಪ್ರೌಢ ಮಹಿಳೆಯಂತೆ, ಕೆಲವೊಮ್ಮೆ ಆಗಷ್ಟೇ ಕಾಲೇಜು ಮುಗಿಸಿ ಬಂದ ಯುವತಿಯಂತೆ ಕಾಣುವ ವಿದ್ಯಾ, ಮೊನ್ನೆ ಮೊನ್ನೆ 36ರ ಹರೆಯಕ್ಕೆ ಕಾಲಿರಿಸಿದ್ದಾಳೆ.

'ಸಮಾಜ ಯಾವಾಗಲೂ ಜನರಲ್ಲಿ ಯೌವನವನ್ನೇ ಬಯಸುತ್ತದೆ. ಹೀಗಾಗಿ ನಟಿಯರಷ್ಟೇ ಅಲ್ಲ, ಪ್ರತಿ ಮಹಿಳೆಗೂ ಯೌವನದಲ್ಲಿಯೇ ಉಳಿಯಬೇಕು ಎನ್ನುವ ಒತ್ತಡವನ್ನು ಅದು ಹೇರುತ್ತದೆ. ಇದರಿಂದ ಅವರು ಹೆಚ್ಚು ಚಿಂತೆಗೆ ಒಳಗಾಗುತ್ತಾರೆ. ಆದರೆ ನನ್ನ ಪ್ರಕಾರ ವಯಸ್ಸು ಒಂದು ಸಂಖ್ಯೆಯಷ್ಟೇ. ಅದಕ್ಕೆ ಹೆಚ್ಚಿನ ಮಹತ್ವ ಕೊಡುವ ಅಗತ್ಯವಿಲ್ಲ' ಎಂದಿದ್ದಾಳೆ ವಿದ್ಯಾ. 'ನನ್ನ ಸಿನಿಮಾ ಚೆನ್ನಾಗಿ ಓಡುತ್ತಿದೆ ಎಂದು ತಿಳಿದಾಗ ಖುಷಿಯಾಗುತ್ತದೆ. ಅದೇ ಗಳಿಕೆಯಲ್ಲಿ ಹಿಂದೆ ಉಳಿದಿದೆ ಎಂದು ಗೊತ್ತಾದಾಗ ಸಹಜವಾಗಿಯೇ ಬೇಸರವಾಗುತ್ತದೆ. ಆದರೆ ಅದರ ಹಿಂದಿರುವ ಸಂಖ್ಯೆಗಳ ಲೆಕ್ಕಾಚಾರ ನನಗೆ ಅರ್ಥವಾಗುವುದಿಲ್ಲ' ಎನ್ನುವುದು ವಿದ್ಯಾ ಮಾತು.

■ ಅಮಿ